ಪೊಲೀಸ್ ಇಲಾಖಾ.

ತಾರೀಖು 5ನೇ ಕಪ್ಟಂಬರ್ 1876.

ಕೋಲಾರ ಡಿಸ್ಟ್ರಿಕ್ಟು ಸಬ್ ಇನ್ಸ್ಪೆಕ್ಟರ್ ನಾರಾಯಣಸಾಮಿ ನಾಯಕರಿಗೆ 1876ನೇ ಇಸವೀ ಆಗಸ್ಟ್ 14ನೇ ಮುಕ್ತಂ ಲಗಾಯತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟ್ಯತೇ ಹೊರ್ತು ಮೊಹೇ ಗುಜಸ್ತಾ 12ನೇ ಮುಕ್ತಂ ಮೈಸೂರು ಗೆಜಿಟ್ 2ನೇ ಭಾಗದ 406ನೇ ಪುಟದಲ್ಲಿ ಘಾಯಿಷ್ ಮಾಡಲ್ಪಟ್ಟ ಮೇರೆ ಅದೇ ತಿಂಗಳು 12ನೇ ತಾರೀಖು ಲಗಾಯತು ಕೊಡಲ್ಪಡಲಿಲ್ಲ.

"ಬಪೋಜೀಬ್ ಹುಕ್ಕುಂ,"

W. PORTEOUS,
Offg. Dy. Inspector General of Police.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 25ನೇ ಅಗಸ್ಟ್ 1876.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾದ ಬಾಬತು ಸಂದಲ್‌ಮರದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವು.

ಕವಲೇದುರ್ಗ, 4ನೇ	ಅಕ್ಟೋಬರ್	1876.	ಹೆಚ್ಚು ಕಡಮೆ 200 ಟ್ಯಗಳ ವಜನಿ.
ಶಿವಮೊಗ್ಗಾ, 16ನೇ	,,	,,	
ಸಾಗರ್, 25ನೇ	,,	,,	
ಹುಣಸೂರು, 4ನೇ	ನವಂಬರ್	,,	ಹೆಚ್ಚು ಕಡಮೆ 560 ಟ್ಯಗಳ ವಜನಿ.
ಶ್ರೀರಂಗಪಟ್ಟ್ಣ, 8ನೇ	,,	,,	
ಬೆಂಗಳೂರು, 1ನೇ	ಡಿಸಂಬರ್	,,	ಹೆಚ್ಚು ಕಡಮೆ 100 ಟ್ಯಗಳು.
ಫೈಜರ್‌ಪೇಟೆ 18ನೇ	,,	,,	.. 80 ,,

ಹರಾಜ್ ನಿಬಂಧನೆ—ಹರಾಜ್ ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್ ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ್ 28ನೇ ಮುಕ್ತಂ 47ನೇ ನಂಬರು ಮೈಸೂರು ಗೆಜಿಟ್‌ನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸುಪಾಸು ಕೋಠೀಗಳಲ್ಲಿ ಯಾ ಹರಾಜ್‌ಗಳು ನವಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಗೆ ಡಿಪಾಜಿಟ್ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತ್ತೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರವರಿ 6ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಕೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಕ್ಯೂಬಿಕ್ ಫೂಟ್, ಪೌಂಡ್, ಹಂಡ್ರೆಡ್ ವೆಯಿಟ್ ಟ್ಯಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.